ಅವರು ಬರೆಯದೇ ಬಿಟ್ಟ ವಿಷಯಗಳು ಇನ್ನೆಷ್ಟೋ. ಎಷ್ಟೋ ಬಾರಿ ತರಗತಿಯ ಒಳಗಡೆ ನಾವು ಹೇಳುವ ತಮಾಷೆಗಳಿಗೆ ಮಕ್ಕಳು ನಗಬೇಕೆನ್ನುವ ಉದ್ದೇಶ, ಕೇಳುವ ಪ್ರಶ್ನೆಗಳಿಗೆ ಉತ್ತರಿಸಬೇಕೆನ್ನುವ ಅಪೇಕ್ಷೆ ಇವೆಲ್ಲವೂ ಉಪನ್ಯಾಸಕರಿಗೆ ಇರುತ್ತದೆ. ಆದರೆ ನಮ್ಮ ಸಮ್ಮುಖದಲ್ಲಿ ಕೂತ ಮಕ್ಕಳ ಮನೆಗೆ ಹೋಗುವ ಸರದಿ ಬಂದರೆ, ಅಲ್ಲಿಯ ಪರಿಸ್ಥಿತಿಯನ್ನು ಅವಲೋಕಿಸಿದರೆ ಮಕ್ಕಳಿಂದ ತುಂಬಾ ಬಯಸುವ ನಿರೀಕ್ಷಿಸುವ ಶಿಕ್ಷಕ ಈ ಮೇಲಿನ ಕಾರಣಗಳಿಗಾಗಿ ಖಂಡಿತ ಭ್ರಮನಿರಸನಕ್ಕೆ ಒಳಗಾಗುತ್ತಾನೆ.

ರಾಜ್ಯದಲ್ಲಿ ಸುಮಾರು 430 ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಿವೆ. ನನಗೆ ಗೊತ್ತಿರುವ ಹಾಗೆ ದಕ್ಷಿಣ ಭಾರತದ ಯಾವುದೇ ರಾಜ್ಯಗಳಲ್ಲಿ ಇಷ್ಟೊಂದು ಸರಕಾರಿ ಕಾಲೇಜುಗಳಿಲ್ಲ. ಸುಮಾರು 50ರಷ್ಟು ಮಹಿಳಾ ಕಾಲೇಜುಗಳೇ ಇವೆ. ಲಕ್ಷಾಂತರ ರೂಪಾಯಿ ಫೀಸು ಕೊಟ್ಟು ಶ್ರೀಮಂತ ಖಾಸಗಿ ಕಾಲೇಜುಗಳಿಗೆ ಸೇರಲಾಗದ ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳು ಇವತ್ತು ಸರಕಾರಿ ಸಂಸ್ಥೆಗಳಲ್ಲಿ ಕನಿಷ್ಠ ಶುಲ್ಕ ತುಂಬಿ ಸೇರುತ್ತಿದ್ದಾರೆ. ಬಹುಪಾಲು ಈ ಮಕ್ಕಳು ಉನ್ನತ ಪದವಿ ಶಿಕ್ಷಣಕ್ಕೆ ತೆರೆದುಕೊಂಡ ಆ ಮನೆಯ ಮೊದಲ ತಲೆಮಾರು. ಅವರ ತಂದೆ ತಾಯಿ, ಅಜ್ಜ ಅಜ್ಜಿ, ಅಕ್ಕ ಅಣ್ಣ, ಯಾರು ಓದದೆ ಮೊಟ್ಟಮೊದಲ ಬಾರಿಗೆ ನಗರ ಕೇಂದ್ರಿತ ಇಂತಹ ಸರಕಾರಿ ಶಾಲೆಗಳಿಗೆ ಈ ಮಕ್ಕಳು ತೆರೆದುಕೊಂಡಿದ್ದಾರೆ. ಕಳೆದ 28 ವರ್ಷಗಳಲ್ಲಿ ಸರಕಾರಿ ಕಾಲೇಜು ಒಂದರಲ್ಲಿ ಸಾಹಿತ್ಯ ಪಾಠ ಮಾಡುತ್ತಾ ಬಂದ ನನಗೆ ಈವರೆಗೆ ಒಬ್ಬನೇ ಒಬ್ಬ ವೈದ್ಯ, ಎಂಜಿನಿಯರ್, ಶ್ರೀಮಂತ ಉದ್ಯಮಿ, ಜಮೀನ್ದಾರರ ಮಕ್ಕಳು ವಿದ್ಯಾರ್ಥಿಗಳಾಗಿ ಸಿಕ್ಕಿಲ್ಲ. ಬಹುತೇಕ ಆರ್ಥಿಕವಾಗಿ ಹಿಂದುಳಿದ ಮನೆಯಲ್ಲಿ ಹತ್ತಾರು ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಿರುವ ಪೌಷ್ಟಿಕಾಂಶಗಳ ಕೊರತೆ ಇರುವ ಮಕ್ಕಳೇ ಸಿಗುತ್ತಿದ್ದಾರೆ. ಈ ಕಾರಣಕ್ಕೆ ಎಷ್ಟೋ ಖಾಸಗಿ ಕಾಲೇಜುಗಳಿಗಿಂತ ಸರಕಾರಿ ಕಾಲೇಜುಗಳಲ್ಲಿ ಪಾಠ ಮಾಡುವ ಉಪನ್ಯಾಸಕರು ಇಂಥ ಮಕ್ಕಳನ್ನು ಮುಖಾಮುಖಿಯಾಗುವಾಗ ಅವರೊಳಗೆ ಬುದ್ಧಿ ತುಂಬುವ ಜೊತೆ ಜೊತೆಗೇನೇ ಮಾನಸಿಕ ಸ್ಥೈರ್ಯ ಧೈರ್ಯ ಮುಂತಾದ ಭಾವ ಅಂಶಗಳನ್ನು ತುಂಬುವ ಕೆಲಸವನ್ನು ಪ್ರಧಾನ ಆದ್ಯತೆಯಲ್ಲಿ ಮಾಡಬೇಕೆನ್ನುವುದನ್ನು ಒತ್ತಿ ಹೇಳುತ್ತಾ ಬಂದಿದ್ದೇನೆ.

ಬಹುತ್ವ ಬಡತನ ಸಂವೇದನೆ ಮನುಷ್ಯ ಪ್ರೀತಿ ಇವೆಲ್ಲವನ್ನು ಇಂತಹ ಸಂಸ್ಥೆಗಳಲ್ಲಿ ನಾವು ನೋಡಲಾಗುತ್ತದೆ. ಯಾವುದೋ ಹಳ್ಳಿ ಶಾಲೆಯಲ್ಲಿ ಓದಿ, ಅಲ್ಲೇ ಇರುವ ಪದವಿಪೂರ್ವ ಕಾಲೇಜಿನಲ್ಲಿ ಪಿಯುಸಿ ಮುಗಿಸಿದ ಬಡತನದ ಹಿನ್ನೆಲೆಯ ವಿದ್ಯಾರ್ಥಿನಿಯರು ಒಮ್ಮೆಲೇ ನಗರ ಕೇಂದ್ರಿತ ಪದವಿ ಕಾಲೇಜುಗಳಿಗೆ ಮುಖಾಮುಖಿಯಾಗುವಾಗ ಅವರ ಮನಸ್ಸು ಗೊಂದಲಕ್ಕೆ ಒಳಗಾಗುವುದು ಸಹಜ. ಇನ್ನೊಂದು ಕಡೆ ತನಗೆ ಬಂದ ಕಷ್ಟ ತನ್ನ ಮಗಳಿಗೆ ಬರಬಾರದು, ತಾನು ಓದಿಲ್ಲ, ಆಕೆ ಓದಿ ಉದ್ಯೋಗಸ್ಥಳಾಗಬೇಕು ಎಂದು ಬಯಸುವ, ದುಡಿದು ಸಾಲ ಮಾಡಿ ಕಷ್ಟಪಟ್ಟು ಓದಿಸುವ ಹೆತ್ತವರ ಆಸೆ ಆಕಾಂಕ್ಷೆಗಳನ್ನು ಈಡೇರಿಸಬೇಕೆನ್ನುವ ಮಕ್ಕಳು. ಇಲ್ಲಿ ಆಧುನಿಕತೆ ಮತ್ತು ಸಾಂಪ್ರದಾಯಿಕತೆಗೆ ನಡುವೆ ಸಿಕ್ಕಿಕೊಳ್ಳುವ ಮನಸ್ಥಿತಿಯ ಭಾವಾಂಶಗಳನ್ನು ಕೂಡ ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ.

ಅವಳ ಅಪ್ಪ ಓದಿಲ್ಲ, ಅಮ್ಮ ಓದಿಲ್ಲ, ಅಕ್ಕ ಓದಿಲ್ಲ, ಇವಳೇನು ಓದಿ ಕಡಿದು ಕಟ್ಟೆ ಹಾಕುತ್ತಾಳೆ? ಅವಳ ಜಾತಿಯವರು ದುಡಿದು ಬದುಕುವುದೇ ಶ್ರೇಯಸ್ಸು, ಇಂಥವರಿಗೆ ಯಾಕೆ ಕಾಲೇಜು? ಎಂದು ಬೇರೆಯವರು ಯಾಕೆ ತನ್ನ ಕುಟುಂಬದ ಸದಸ್ಯರೇ ಟೀಕಿಸುವ, ಮೊದಲ ಬಾರಿಗೆ ಕಾಲೇಜಿಗೆ ಹೊರಟ ಮಗುವನ್ನು ಅವಮಾನಿಸುವ, ಅನುಮಾನಿಸುವ ಪ್ರವೃತ್ತಿ ಸಕುಟುಂಬದಲ್ಲಿ ಇರುವಾಗ ಇವರೆಲ್ಲ ಎಷ್ಟೊಂದು ಸವಾಲುಗಳನ್ನು ಎದುರಿಸಿ ಸಮಾಜ ಮುಕ್ತರಾಗಬೇಕೆನ್ನುವುದು ಕೂಡ ಗಂಭೀರವಾದಂತಹ ಪ್ರಶ್ನೆ. ಸಾಮಾನ್ಯವಾಗಿ ಇಂತಹ ಹೆಣ್ಣು ಮಕ್ಕಳು ಕಾಲೇಜಿನ ದಾರಿಯನ್ನು ಏಕಾಂತದಲ್ಲಿ ನಡೆಯುವ, ಬಸ್ಸಲ್ಲಿ ಪ್ರಯಾಣಿಸುವ ಸಾಧ್ಯತೆಗಳೇ ಹೆಚ್ಚು. ಈ ಹಾದಿ ಎಷ್ಟೋ ದಾರಿಹೋಕ ಸಹಪ್ರಯಾಣಿಕ ಕಾಮುಕರಿಂದ ದಿನನಿತ್ಯದ ಕಿರುಕುಳಕ್ಕೆ ಅವಕಾಶ ಮಾಡಿಕೊಡುತ್ತದೆ. ಪಕ್ಕದಲ್ಲಿ ಕೂತ ದಾಂಡಿಗ ಸಹಪ್ರಯಾಣಿಕ ಕೊಡುವ ದೈಹಿಕ ಕಿರುಕುಳಗಳನ್ನು ಕೂತಲ್ಲೇ ಅನುಭವಿಸಿ ಅನೇಕರು ಮಾನಸಿಕವಾಗಿ ನರಳುತ್ತಾರೆ. ಹೆಣ್ಣಿನ ಮುಟ್ಟಿನ ಸಂದರ್ಭದಲ್ಲಿ ಬಹಳಷ್ಟು ಗ್ರಾಮೀಣ ಮನೆಗಳಲ್ಲಿ ನಾನಾ ತರದ ಮೌಢ್ಯ ಅಜ್ಞಾನ ಆಚರಣೆಗಳು ಇವತ್ತಿಗೂ ಇವೆ. ಇದೊಂದು ಸಹಜ ನೈಸರ್ಗಿಕ ಪ್ರಕ್ರಿಯೆಯಾದರೂ ಆಕೆಯನ್ನು ತೀರಾ ಹೇಸಿಗೆಯಿಂದ ನಡೆಸಿಕೊಳ್ಳುತ್ತಾರೆ. ಪಕ್ಕಕ್ಕೆ ಬಂದರೆ ಮೈಲಿಗೆ ಎನ್ನುವವರು ಈಗಲೂ ನಮ್ಮ ಹಳ್ಳಿ ಮನೆಗಳಲ್ಲಿ ಇದ್ದಾರೆ. ಇಂಥ ಅಮಾನವೀಯ ಆಚರಣೆಗಳನ್ನು ಎಷ್ಟೋ ಹೆಣ್ಣು ಮಕ್ಕಳು ಈಗಲೂ ಅನುಭವಿಸುತ್ತಿದ್ದಾರೆ.

ನಿಧಾನವಾಗಿ ಗ್ರಾಮೀಣ ಹೆಣ್ಣು ಮಕ್ಕಳಿಗೆ ಇವುಗಳ ಅರಿವು ಹೆಚ್ಚಾಗುತ್ತಿರುವುದು ಸಂತೋಷದ ಸಂಗತಿ. ಹಳ್ಳಿ ಕೇಂದ್ರಿತ ಕಾಲೇಜುಗಳ ಪರಿಸರದಲ್ಲಿ ಉತ್ತಮ ಆಸ್ಪತ್ರೆ ಚಿಕಿತ್ಸಾ ಕೇಂದ್ರಗಳು ಇಲ್ಲದಿರುವುದು, ಕಾಲೇಜುಗಳಲ್ಲಿ ದೈಹಿಕ ಸಮಸ್ಯೆಗಳಿಂದ ಆಗಾಗ ಕುಸಿದು ಬೀಳುವುದು, ಬೇಕಾದ ಆರೋಗ್ಯ ಸಂರಕ್ಷಣೆಯ ಚಿಕಿತ್ಸೆ ಔಷಧಿಗಳು ನಮಗೆ ಲಭ್ಯವಾಗದಿರುವುದು ಒಂದು ಮುಖ್ಯ ಸಮಸ್ಯೆ ಎನ್ನುತ್ತಾರೆ ನಿಶ್ಚಿತ ಎಂ. ಈಕೆ ಪುತ್ತೂರಿನ ಸರಕಾರಿ ಕಾಲೇಜು ಒಂದರ ವಿದ್ಯಾರ್ಥಿನಿ. ಯಾವುದೋ ಹುಡುಗಿಯೊಬ್ಬಳು ಇನ್ಯಾರೋ ಒಬ್ಬರ ಬೈಕ್ ಹಿಂಬದಿಯಲ್ಲಿ ಕೂತು ಪಯಣಿಸಿದರೆ ನನ್ನ ಮನೆಯ ಜಗಲಿಯಲ್ಲಿ ಕೂತು ಹಿರಿಯರೊಬ್ಬರು ನೋಡಿ, ಇದು ನಮ್ಮೂರ ಮರ್ಯಾದೆಯ ಪ್ರಶ್ನೆ ಎನ್ನುತ್ತಾರೆ. ಈ ರೀತಿ ಯಾವುದು ಮರ್ಯಾದೆ, ಯಾವುದು ಮರ್ಯಾದೆ ಅಲ್ಲ ಎಂದು ಮೌಲ್ಯಮಾಪನ ಮಾಡಿ ತೀರ್ಪು ಕೊಡುವ ಹತ್ತಾರು ಮಂದಿ ನಮ್ಮ ಗ್ರಾಮಗಳಲ್ಲಿದ್ದಾರೆ.

ಹಾಗಂತ ಇದೆಲ್ಲಾ ಬೆಂಗಳೂರು, ಮುಂಬೈಯಂತಹ ಮಹಾನಗರಗಳಲ್ಲಿ ಮೌಲ್ಯಮಾಪನ ಪ್ರಕ್ರಿಯೆಗೆ ಒಳಗಾಗುವುದಿಲ್ಲ. ಲಾಲ್‌ಬಾಗಿನಲ್ಲೋ ಕೆಂಪೇಗೌಡ ಬಸ್ ನಿಲ್ದಾಣದಲ್ಲೋ ಯುವಪ್ರೇಮಿಗಳು ಕೂತು ಪರಸ್ಪರ ಮೈಮುಟ್ಟುತ್ತಿದ್ದರೂ ಅದು ಬೆಂಗಳೂರಿನ ಮರ್ಯಾದೆಯ ಪ್ರಶ್ನೆ ಆಗುವುದಿಲ್ಲ. ಮುಂಬಯಿಯ ಮಾನದ ಪ್ರಶ್ನೆ ಆಗುವುದಿಲ್ಲ. ಹಳ್ಳಿಗಳಲ್ಲಿ ಅದರಲ್ಲೂ ಬಡತನದ ವರ್ತುಲದಲ್ಲಿ ಇಂಥ ಮಾನ ಮರ್ಯಾದೆಯ ಪ್ರಶ್ನೆಗಳು ಕೂಡ ಓದುವ ಮನಸ್ಸುಗಳಿಗೆ ಕಿರಿಕಿರಿಗಳನ್ನೇ ಉಂಟುಮಾಡುತ್ತವೆ. ಧರಿಸುವ ವಸ್ತ್ರ ಹಾವ ಭಾವ ಮಾತುಗಾರಿಕೆ ಶಬ್ದ ಬಳಕೆಗಳು ಕೂಡ ಗುಂಪಿನಲ್ಲಿ ಅನುಮಾನಕ್ಕೆ ಎಡೆ ಕೊಡುತ್ತದೆ. ಹಳ್ಳಿ ದಾರಿಗಳಲ್ಲಿ ನೀವು ಮೈಲು ದೂರ ನಡೆದುಕೊಂಡೇ ಹೋಗುವುದಾದರೆ ಕೆಲವೊಮ್ಮೆ ಸುಖ. ಬಹುಪಾಲು ಅಸುಖ. ನೀವು ಆ ದಾರಿಗೆ ಹೊಸಬರಾದರೆ ಅಲ್ಲೆಲ್ಲಾ ಕುಹಕದ ಸಿ.ಸಿ. ಕ್ಯಾಮರಾಗಳು ಒಮ್ಮೆಲೇ ಆನ್ ಆಗುತ್ತವೆ. ಹಳ್ಳಿ ಅಂಗಡಿಯ ಮುಂಗಟ್ಟೆ, ಅರಳೀಕಟ್ಟೆ, ದೇವಸ್ಥಾನದ ಜಗಲಿ, ಮನೆಗಳ ಕಿಟಕಿಗಳು ಇಲ್ಲೆಲ್ಲಾ ಹಳ್ಳಿ ಮಕ್ಕಳ ಮೇಲೆ ಒಂದಷ್ಟು ಕಣ್ಣುಗಳು ಹೊಂಚುತ್ತವೆ. ನೀವು ಅವರ ಪಾಲಿಗೆ ದಾರಿ ತಪ್ಪಿದರೆ ಅಗೋಚರ ಸೈರನ್‌ಗಳು ಲೋಕವಿಡೀ ಮೊಳಗುತ್ತವೆ. ಏಕಕಾಲದಲ್ಲಿ ಈ ಎಲ್ಲವನ್ನು ಗಮನಿಸುತ್ತಾ ತರಗತಿ ಒಳಗಡೆ ಅಧ್ಯಯನ ನಿರತವಾಗುತ್ತದೆ ಕಲಿಕೆಯ ಜೊತೆಗೆ ಒಳಗೊಳ್ಳುತ್ತ ಬಾಳುವುದು ಹಳ್ಳಿ ವಿದ್ಯಾರ್ಥಿಗಳಿಗೆ ಕಷ್ಟವೇ ಸರಿ.



ಪ್ರತಿಕ್ರಿಯಿಸಿ: feedback@sudha.co.in